ಬೆತ್ತಲೆಗೊಳಿಸಿ, ಅವರನ್ನು ಮರಕ್ಕೆ ಕಟ್ಟಿ ಹಾಕಿ, ಹಿಂಸಿಸಿ ಸಾಯಿಸಿದ್ದಾರೆ. ನಿಮ್ಮ ಜನ ಅವರನ್ನು ಬೆದರಿಸಿ, ಬೀದಿಬೀದಿಯಲ್ಲಿ ಅವರ ಮೇಲೆ ಬಲಾತ್ಕಾರ ಮಾಡಿದ್ದಾರೆ ಮತ್ತು ಕೊಂದಿದ್ದಾರೆ... ನಿಮ್ಮ ಜನ ತಮಗೆ ಬೇಕಾದ ಹೋರಾಟಗಾರರು ಸಿಕ್ಕದಿದ್ದಾಗ, ಅವರ ಮನೆಯ ಹೆಂಗಸರ ಮೇಲೆ ಬಲಾತ್ಕಾರ ಮಾಡಿ, ಅವರನ್ನು ಕೊಲೆ ಮಾಡಿದ್ದಾರೆ. ಈ ಎಲ್ಲಾ ದುಷ್ಕೃತ್ಯಗಳಿಗೆ ನೀವು ಮತ್ತು ನಿಮ್ಮ ಜನ ಉತ್ತರಿಸಬೇಕಾದ ಕಾಲ ಶೀಘ್ರದಲ್ಲೇ ಬರಲಿದೆ...

ನನ್ನ ಮಾತನ್ನು ನಂಬಿ, ಲಿನ್‌ಲಿತ್‌ಗೌ: ಒಂದು ವೇಳೆ ನಾವೇನಾದರೂ ಶಸ್ತ್ರ ಹಿಡಿದು ನಿಂತಿದ್ದರೆ, ನಮ್ಮ ಜನರಿಗೆ ಹಿಂಸೆಯನ್ನು ಆಯ್ಕೆ ಮಾಡಿಕೊಳ್ಳಿ ಎಂದು ಹೇಳಿದ್ದರೆ, ಈ ಹೊತ್ತು ಸ್ವತಂತ್ರ ಜನತೆ ಹಾಗೂ ಅವರ ಸ್ವತಂತ್ರ ಸರ್ಕಾರದಿಂದ ನಿಮಗೆ ಮರಣದಂಡನೆಯಾಗಿರುತ್ತಿತ್ತು; ಆ ಮರಣದಂಡನೆಯನ್ನು ತಪ್ಪಿಸಿ ಕ್ಷಮಾದಾನ ಕೊಡಿಸಲು ಗಾಂಧೀಜಿ ಪ್ರಯತ್ನಿಸುತ್ತಿರುತ್ತಿದ್ದರು.

ಆದರೆ ನಾನು ಅಸಂತುಷ್ಟನಾಗಿಲ್ಲ; ಇನ್ನೊಬ್ಬರಿಗಾಗಿ ದುಃಖ ಅನುಭವಿಸುವುದು ಹಾಗೂ ಆ ಮೂಲಕ ಅವರನ್ನು ಸರಿದಾರಿಗೆ ತರುವುದು ಭಾರತದ ಪರಂಪರೆಯೇ ಆಗಿದೆ. ನಿರಾಯುಧರಾದ ಸಾಮಾನ್ಯ ಜನತೆಯ ಚರಿತ್ರೆ ಆಗಸ್ಟ್ 9ರ ಭಾರತೀಯ ಕ್ರಾಂತಿಯಿಂದಲೇ ಆರಂಭವಾಗುತ್ತದೆ.

ನೀವು ನಿಮ್ಮ ಆತ್ಮಸಾಕ್ಷಿಗೆ ಹೆದರಿ– ನಿಮ್ಮಲ್ಲೂ ಆತ್ಮಸಾಕ್ಷಿ ಇರಬಹುದು– ಅಥವಾ ಜನತೆಯ ಕೋಪೋದ್ರೇಕಕ್ಕೆ ಹೆದರಿಕೊಂಡು ಗಾಂಧೀಜಿಯವರನ್ನು ಬಿಡುಗಡೆ ಮಾಡಬಹುದು. ನೀವು ಬಿಡುಗಡೆ ಮಾಡಿ ಇಲ್ಲವೇ ಬಿಡಿ, ನೀವು ಸಂಪೂರ್ಣ ಶರಣಾಗತರಾಗುವವರೆಗೆ ನಮ್ಮ ಸ್ವಾತಂತ್ರ್ಯದ ಹುಮ್ಮಸ್ಸು ಮಾತ್ರ ನಿಮ್ಮ ಬೆನ್ನು ಬಿಡುವುದಿಲ್ಲ, ನೆನಪಿರಲಿ.

ದಬ್ಬಾಳಿಕೆಯ ಸಂದರ್ಭದಲ್ಲಿ ಲಭ್ಯವಿರುವ ಈ ಸಂಪರ್ಕ ಸಾಧನದ ಮೂಲಕ ಈ ಪತ್ರವನ್ನು ನಿಮಗೆ ಕಳಿಸುತ್ತಿದ್ದೇನೆ.

ನಿಮ್ಮ ನಂಬುಗೆಯ

ರಾಮಮನೋಹರ ಲೋಹಿಯಾ

ಈ ಪ್ರಖ್ಯಾತ ಪತ್ರ ಲಿನ್‌ಲಿತ್‌ಗೌಗೆ ತಲುಪಿತೋ ಇಲ್ಲವೋ ಎಂಬುದರ ದಾಖಲೆಯಿಲ್ಲ. ಆದರೆ ಮುಂದೆ ಇದು ಪ್ರಸಾರಗೊಂಡು ಸ್ವಾತಂತ್ರ್ಯ ಹೋರಾಟಗಾರರಲ್ಲಿ ಸಂಚಲನ ಮೂಡಿಸಿತು.

1945ರ ಶುರುವಿನಲ್ಲಿ ಕಾನೂನಿನ ಪ್ರಕ್ರಿಯೆಗಳು ಬಿರುಸಾಗತೊಡಗಿದಾಗ ಸರ್ಕಾರ ಲೋಹಿಯಾ, ಜೆ.ಪಿ. ಇಬ್ಬರನ್ನೂ ಆಗ್ರಾ ಜೈಲಿಗೆ ವರ್ಗಾಯಿಸಿತು. ಈಗ ಅವರು 'ರಾಜಕೀಯ ಕೈದಿ'ಗಳಾಗಿದ್ದರು. ಪುಸ್ತಕಗಳು, ಸೆನ್ಸಾರಾದ ಅಂಚೆ ಪತ್ರಗಳು, ಪೆನ್ನು, ಪೇಪರುಗಳನ್ನು ಪಡೆಯುವ ಅವಕಾಶ ಸಿಕ್ಕಿತು.

ಲಾಹೋರ್ ಜೈಲಿನಲ್ಲಿದ್ದಾಗಿನಿಂದಲೂ ಪೊಲೀಸರು ಜೆ.ಪಿ.ಯನ್ನು ಕೊಂದಿರಬಹುದೆಂಬ ಆತಂಕ ಲೋಹಿಯಾರಲ್ಲಿತ್ತು. ಅಲ್ಲೇ ರಮಾನಂದನ ಮಿಶ್ರಾ, ಅಚ್ಯುತ್ ಪಟವರ್ಧನ್ ಕೂಡ ಚಿತ್ರಹಿಂಸೆ ಅನುಭವಿಸಿದ್ದು ಲೋಹಿಯಾಗೆ ಗೊತ್ತಿರಲಿಲ್ಲ. ಲೋಹಿಯಾ ಆಗ್ರಾ ಜೈಲಿಗೆ ಬಂದ ಮೇಲೆ ಜೆ.ಪಿ.ಯನ್ನು ಕಂಡರು; ಇಬ್ಬರೂ ಒಬ್ಬರನ್ನೊಬ್ಬರು ನೋಡಿ ಆನಂದಪಟ್ಟರು. ಈ ಭೇಟಿಯನ್ನು ಡಿ.ಎಸ್. ನಾಗಭೂಷಣ ದಾಖಲಿಸುತ್ತಾರೆ:

ಒಂದು ಸಂಜೆ ಕಾವಲುಗಾರರು ಜೆ.ಪಿ.ಯಿದ್ದ ಬಂದಿಖಾನೆಯ ಬಾಗಿಲು ತೆರೆದರು: ತಮ್ಮೆದುರಿಗೆ 'ಕೃಶಕಾಯರಾದ, ಆದರೆ ಕನ್ನಡಕದ ಗಾಜಿನೊಳಗೆ ಎಂದಿನಂತೆ ಪ್ರಕಾಶಮಾನವಾಗಿ ಹೊಳೆಯುತ್ತಿದ್ದ ಕಣ್ಣುಗಳ' ಲೋಹಿಯಾರನ್ನು ಜೆ.ಪಿ. ಕಂಡರು. 'ಅದು ಮಾನವನು ಮಾನವಲೋಕಕ್ಕೆ ಹಿಂತಿರುಗಿದ ಕ್ಷಣವಾಗಿತ್ತು.' ಅದು ತಮ್ಮ ಬದುಕಿನಲ್ಲಿ 'ಎಂದೆಂದೂ ಮರೆಯಲಾಗದ ಕ್ಷಣ' ಎಂದು ಜೆ.ಪಿ. ಬಣ್ಣಿಸಿದರು.

ಅತ್ತ, ಮಗ ಎಲ್ಲಿದ್ದಾನೆಂಬ ಸುದ್ದಿಯೇ ತಿಳಿಯದ ಅಪ್ಪ ಹೀರಾಲಾಲರ ಆತಂಕಗಳನ್ನು ನಾವು ಊಹಿಸಿಕೊಳ್ಳಬಹುದಷ್ಟೇ ಹೊರತು, ಖಚಿತವಾಗಿ ದಾಖಲಿಸಲಾಗದು. ಕಾರಣ, ಜೀವನ ಚರಿತ್ರೆ ಬರೆಯುವವರು ಸರಳೀಕರಿಸಿದ, ಹುಸಿಯಾದ ಮನೋವಿಶ್ಲೇಷಣೆಯ ಹಳ್ಳಕ್ಕೆ ಎಂದೂ ಬೀಳಬಾರದು. ಮಗ ಲಾಹೋರ್ ಜೈಲಿನಲ್ಲಿರುವ ವಿಷಯ ಗೊತ್ತಾದಾಗ ಹೀರಾಲಾಲ್ ಮಗನಿಗೆ ಪತ್ರ ಬರೆಯತೊಡಗಿದರು. ಆಗ್ರಾ ಜೈಲಿನಲ್ಲಿ ಲೋಹಿಯಾಗೆ ಪತ್ರಗಳನ್ನು ಪಡೆಯುವ ಅವಕಾಶ ಸಿಕ್ಕಿತು.

ಹೀರಾಲಾಲರ ಪತ್ರಗಳು ಸೂಚಿಸುವಂತೆ ಅವರ ಆರೋಗ್ಯ ಕೆಡತೊಡಗಿತ್ತು. ರಕ್ತದೊತ್ತಡ ಏರುತ್ತಿತ್ತು. ಮಗನನ್ನು ನೋಡಲು ಕಾತರಿಸುತ್ತಿದ್ದರು. ಪತ್ರಗಳಲ್ಲಿ ನಿರಾಶೆ ತುಂಬಿರುತ್ತಿತ್ತು. ಭಾರತಕ್ಕೆ ಅಧಿಕಾರ ಹಸ್ತಾಂತರ ಕುರಿತಂತೆ ಶಿಮ್ಲಾ ಮಾತುಕತೆಯಲ್ಲಿ ಬಿಕ್ಕಟ್ಟು ಹುಟ್ಟಿದ್ದನ್ನು ಕೇಳಿ ಹೀರಾಲಾಲ್ ಖಿನ್ನರಾಗಿದ್ದರು. ಮಗನ ಆರೋಗ್ಯದ ಸ್ಥಿತಿ ಕುರಿತ ಕಳವಳ ಅವರನ್ನು ಮುತ್ತಿತ್ತು. ಮಗನಿಗೆ ಹಣ, ಬಟ್ಟೆ ಪುಸ್ತಕಗಳನ್ನು ಕಳಿಸುತ್ತಿದ್ದರು. 'ನಿನ್ನನ್ನು ಎಂದು ನೋಡುತ್ತೇನೋ ತಿಳಿಯದು; ನೀನಿಲ್ಲದೆ ನನ್ನ ಸ್ಥಿತಿ ಹುಚ್ಚನಂತಾಗಿದೆ' ಎಂದು ಹೀರಾಲಾಲ್ ಮಗನಿಗೆ ಬರೆದರು.

26 ಸೆಪ್ಟೆಂಬರ್ 1945ರ ಪತ್ರದಲ್ಲಿ ಹೀರಾಲಾಲ್ ಬರೆದಿದ್ದರು: 'ಇಪ್ಪತ್ತೊಂದನೇ ತಾರೀಕು ಕಲ್ಕತ್ತಾದಿಂದ ಹೊರಡುತ್ತೇನೆ; ನಿನ್ನನ್ನು ನೋಡಲು ಆಗ್ರಾ ತಲುಪುತ್ತೇನೆ.'

ಆಗ್ರಾಕ್ಕೆ ಬಂದ ಹೀರಾಲಾಲ್‌ಗೆ ಮಗನನ್ನು ನೋಡಲು ಅನುಮತಿ ಕೊಡುವಲ್ಲಿ ಸರ್ಕಾರ ತಡ ಮಾಡಿತು. ಆಗ್ರಾದ ಸಭೆಯೊಂದಕ್ಕೆ ಹೋಗುತ್ತಿದ್ದ ಹೀರಾಲಾಲ್ ಮಾರ್ಗಮಧ್ಯದಲ್ಲಿ ಬಸ್ಸಿನಲ್ಲೇ ತೀರಿಕೊಂಡರು. ಹೀರಾಲಾಲರ ಸಾವಿನ ಸುದ್ದಿ ಹೊತ್ತ ಟೆಲಿಗ್ರಾಂ ಲೋಹಿಯಾಗೆ ತಲುಪಿತು; ತಂದೆಯ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲು ಲೋಹಿಯಾ ಪೆರೋಲ್ ಮೇಲೆ ಬಿಡುಗಡೆ ಹೊಂದಬಹುದೆಂಬ ಸೂಚನೆಯೂ ಟೆಲಿಗ್ರಾಂನಲ್ಲಿತ್ತು. ಲೋಹಿಯಾ ಪೆರೋಲ್ ಮೇಲೆ ಹೋಗಲು ಒಪ್ಪಲಿಲ್ಲ.

ತಮ್ಮ ಬಗ್ಗೆ ಹೆಚ್ಚು ಬರೆಯದ, ಮಾತಾಡದ ಲೋಹಿಯಾ ತಂದೆಯ ಬಗ್ಗೆ ಕೂಡ ಹೆಚ್ಚು ಮಾತಾಡಿದವರಲ್ಲ. ಅಲ್ಲಿಇಲ್ಲಿ ದೊರಕುವ ವಿವರಗಳು ಸೂಚಿಸುವಂತೆ ಲೋಹಿಯಾ ಇಂಟರ್ ಮೀಡಿಯೆಟ್ ಸೇರಿದ ಮೇಲೆ ಅಪ್ಪ–ಮಗ ಅಪರೂಪಕ್ಕೆ ಭೇಟಿಯಾಗುತ್ತಿದ್ದರು; ನಂತರವಂತೂ ದೇಶದ ಬಿಡುಗಡೆಗಾಗಿ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದ ಪ್ರಬುದ್ಧ ಗೆಳೆಯರಂತಿದ್ದರು.

ಒಮ್ಮೆ ಕಲ್ಕತ್ತಾದಲ್ಲಿ ಅಪ್ಪ–ಮಗ ಮೋಹನ್ ಬಗಾನ್ ತಂಡ ಭಾಗವಹಿಸಿದ್ದ ಫುಟ್‌ಬಾಲ್ ಮ್ಯಾಚ್ ನೋಡಲು ಹೋದರು. ಹೀರಾಲಾಲ್ ಸಿಗರೇಟ್ ಹತ್ತಿಸುತ್ತಾ, 'ನೀನು ಸಿಗರೇಟ್ ಕೂಡ ಸೇದಲ್ಲವಲ್ಲ!' ಎಂದು ಮಗನನ್ನು ಛೇಡಿಸಿದರು. ಲೋಹಿಯಾ 'ಸಿಗರೇಟ್ ಸೇದುವುದನ್ನು ಕಲಿತಿದ್ದೇನೆ' ಎಂದರು. ಹೀರಾಲಾಲ್ ಮಗನಿಗೆ ಸಿಗರೇಟ್ ಕೊಟ್ಟಾಗ ಲೋಹಿಯಾ ಕಡ್ಡಿಪೆಟ್ಟಿಗೆಗಾಗಿ ಅಪ್ಪನತ್ತ ನೋಡಿದರು. 'ಕಡ್ಡಿಪೆಟ್ಟಿಗೇನೂ ಇಲ್ಲದೆ ನೀನೆಂಥ ಸಿಗರೇಟ್ ಸೇದ್ತೀಯಪ್ಪ!' ಎಂದು ಹೀರಾಲಾಲ್ ಮಗನನ್ನು ಛೇಡಿಸಿದರು.

ಹೀರಾಲಾಲ್ ಸಹಜ ಹಾಸ್ಯಪ್ರಜ್ಞೆಯ ವ್ಯಕ್ತಿಯಾಗಿದ್ದರು. ಹೀರಾಲಾಲ್ ಒಮ್ಮೆ ಜೈಲಿನಲ್ಲಿದ್ದಾಗ ಕೆಲವು ತರುಣರು ತಮ್ಮ ಸಮಾಜವಾದಿ ಯೋಜನೆಗಳ ಬಗ್ಗೆ, ದೇಶದ ಸಮಸ್ಯೆಗಳಿಗೆ ಸಮಾಜವಾದಿ ಪರಿಹಾರಗಳ ಬಗ್ಗೆ ಹೀರಾಲಾಲ್ ಬಳಿ ಚರ್ಚಿಸುತ್ತಿದ್ದರು. ಆಗ ಹೀರಾಲಾಲ್ ತಮಾಷೆಯಾಗಿ ಹೇಳಿದ್ದರು: 'ನೀವು ಸಮಾಜವಾದಿಗಳಿರಬಹುದು ಕಣ್ರಯ್ಯಾ! ನಾನ್ಯಾರು ಗೊತ್ತಾ? ಸಮಾಜವಾದಿಯ ಅಪ್ಪ!'

ಕಲ್ಕತ್ತಾದಲ್ಲಿ ಓದುತ್ತಿದ್ದ ಮಗನಿಗೆ ತಿಂಗಳಿಗೆ ಬೇಕಾದ ಐವತ್ತು ರೂಪಾಯಿ ದುಡಿದು ಕಳಿಸುತ್ತಿದ್ದ ಹೀರಾಲಾಲ್, ಉಳಿದಂತೆ ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿರುತ್ತಿದ್ದರು. ಗಾಂಧೀಜಿಯ ಕಟ್ಟಾ ಅನುಯಾಯಿಯಾಗಿದ್ದ ಹೀರಾಲಾಲ್ ಗಾಂಧೀಜಿಯ ಕರೆಯಂತೆ ನಾಗರಿಕ ಅಸಹಕಾರ ಚಳುವಳಿಯನ್ನು ವ್ಯಕ್ತಿಗತ ನೆಲೆಯಲ್ಲಿಯೂ ಮುಂದುವರಿಸಿದರು; ಯುದ್ಧವಿರೋಧಿ ಭಾಷಣ ಮಾಡಿ ಮಗ ಜೈಲಿನಲ್ಲಿದ್ದ ಕಾಲದಲ್ಲಿ, ಹೀರಾಲಾಲ್ ಯುದ್ಧವಿರೋಧಿ ಘೋಷಣೆ ಕೂಗುತ್ತಾ 1941ರಲ್ಲಿ ಕಲ್ಕತ್ತಾದಿಂದ ದೆಹಲಿಯವರೆಗೂ ಚಳುವಳಿಗಾರರ ತಂಡಗಳ ಜೊತೆಗೆ ನಡೆದೇ ಹೋಗಿದ್ದರು.

ಸ್ಟಾಫರ್ಡ್ ಕ್ರಿಪ್ಸ್ ನಿಯೋಗ ಮತ್ತೆ ಭಾರತಕ್ಕೆ ಬಂದಾಗ, ಯುದ್ಧಕಾಲದಲ್ಲಿ ನಗರಗಳನ್ನು ಮುಕ್ತ ಪ್ರದೇಶಗಳನ್ನಾಗಿ ಘೋಷಣೆ ಮಾಡಲು ನಿಯೋಗವನ್ನು ಒತ್ತಾಯಿಸಬೇಕೆಂಬ ಆಲೋಚನೆ ಹೀರಾಲಾಲರಿಗೆ ಹೊಳೆಯಿತು; ಅದನ್ನು ಲೋಹಿಯಾ ಮೂಲಕ ಗಾಂಧೀಜಿಗೆ ತಲುಪಿಸಿದ್ದರು. ಧಾರ್ಮಿಕ ಗ್ರಂಥಗಳನ್ನು, ರಾಷ್ಟ್ರಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಹೆಚ್ಚು ಓದುತ್ತಿದ್ದ ಹೀರಾಲಾಲ್ ಬಳಿ ಐದಾರು ಸಾವಿರ ಒಳ್ಳೊಳ್ಳೆಯ ಪುಸ್ತಕಗಳಿದ್ದವು.

ತಾಯಿಯ ಮುಖವನ್ನು ಹೋಲುತ್ತಿದ್ದ ಲೋಹಿಯಾರ ಸಾರ್ವಜನಿಕ ಕ್ರಿಯೆಗಳು ತಂದೆಯ ಚಟುವಟಿಕೆಗಳ ವಿಸ್ತರಣೆಯಂತಿದ್ದವು. ಭಾರತದ ಸ್ವಾತಂತ್ರ್ಯ ಚಳುವಳಿಯ ಅನಾಮಧೇಯ ಕಾರ್ಯಕರ್ತರಂತಿದ್ದ ಹೀರಾಲಾಲರ ನಿಸ್ವಾರ್ಥ ಜೀವನ, ಹಾಸ್ಯ, ಅಚಲ ದೇಶಪ್ರೇಮ ಮಗನಲ್ಲಿ